ದಿನಾಂಕಃ 21-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ. ಬಿವಿಎ., ವಕೀಲರಿಂದಃ**

ದಿನಾಂಕಃ24/02/2022 ರಂದು ನಾನು ಫಿರ್ಯಾದಿದಾರ ಸಂಸ್ಥೆಯ ಸಿಇಓ., ಅಗಿರುತ್ತೇನೆ. ಅದೇ ದಿನ ನನಗೆ ಸಿಇಓ., ಆಗಿ ಅಧಿಕಾರವನ್ನು ನೀಡಿರುತ್ತಾರೆ. ನಾನು ಈ ಮೊದಲು ಕೊಪ್ಪ ಟಿಎ ಪಿಸಿಎಂಎಸ್ ., ನಲ್ಲಿ ಸಿಇಓ., ಆಗಿ ಕರ್ತವ್ಯವನ್ನು ನಿರ್ವಹಿಸಿ ನಿವೃತ್ತಿ ಹೊಂದಿರುತ್ತೇನೆ.

ನಾನು ಈ ಸಂಸ್ಥೆಯ ಸಿಇಓ., ಆಗುವ ಮುಂಚೆ ಸಂಸ್ಥೆಯ ಎಲ್ಲಾ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ನಾನು ದಾಖಲಾತಿಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ದಾಖಲಾತಿಗಳನ್ನು ಹೊರತುಪಡಿಸಿ ನನಗೆ ಖುದ್ದಾಗಿ ಮಾಹಿತಿಯಿಲ್ಲ ಎಂದರೆ ಈ ಬಗ್ಗೆ ಮೊದಲಿನ ಅಧ್ಯಕ್ಷ ಹಾಗೂ ಹಾಲಿ ನಿರ್ದೇಶಕರಿಂದ ಕೇಳಿ ತಿಳಿದುಕೊಂಡಿರುತ್ತೇನೆ.

ಈ ಪ್ರಕರಣದ ಆರೋಪಿಗೆ ನಮ್ಮ ಸಂಸ್ಥೆಯಿಂದ ದಿನಾಂಕಃ16/11/2017 ರಂದು ರೂ.3,00,000/-ಗಳ ಸಾಲ ಸ್ಯಾಂಕ್ಷನ್ ಆಗಿರುತ್ತದೆ, ಅದರಲ್ಲಿ ಅವರು ರೂ.2,70,000/-ಗಳನ್ನು ಪಡೆದುಕೊಂಡಿರುತ್ತಾರೆ, ಅದರಲ್ಲಿ ಅವರು ಸ್ವಲ್ಪ ಸ್ವಲ್ಪ ಕಟ್ಟಿರುತ್ತಾರೆ. ಈಗ ಸದರಿ ಸಾಲದ ಹಣದಲ್ಲಿ ರೂ.2,72,230/- ಬಡ್ಡಿಯನ್ನೂ ಸೇರಿಸಿ ಬಾಕಿಯಿದೆ.

ಆರೋಪಿಗೆ ನಮ್ಮ ಸಂಸ್ಥೆಯಿಂದ ದಿನಾಂಕಃ16/11/2017 ರಂದು ರೂ.3,00,000/-ಗಳ ಸಾಲ ಸ್ಯಾಂಕ್ಷನ್ ಆಗಿರುವ ಬಗ್ಗೆ ನಮ್ಮ ದೂರು ಅಥವಾ ನೋಟಿಸ್ ನಲ್ಲಿ ನಮೂದಿಸಿರುವುದಿಲ್ಲ ಎಂದರೆ ಆರೋಪಿ ಸಂಸ್ಥೆಗೆ ರೂ.2,72,230/- ಗಳ ಚೆಕ್ಕನ್ನು ನೀಡಿರುತ್ತಾರೆ. ಅದು ಬೌನ್ಸ್ ಆಗಿದ್ದರಿಂದ ಸದರಿ ಪ್ರಕರಣವನ್ನು ಅವರ ವಿರುದ್ಧ ನಮ್ಮ ಸಂಸ್ಥೆಯವರು ದಾಖಲಿಸಿರುತ್ತಾರೆ.

ಆರೋಪಿಯವರಿಗೆ ನಮ್ಮ ಸಂಸ್ಥೆಯಿಂದ ಒಟ್ಟು ಎಷ್ಟು ಹಣ ಮಂಜೂರಾಗಿತ್ತು

ಹಾಗೂ ಅವರು ಎಷ್ಟು ಹಣವನ್ನು ಪಡೆದುಕೊಂಡಿರುತ್ತಾರೆ ಹಾಗೂ ಎಷ್ಟುಬಾಕಿ ಇದೆ ಎಂದು ನಾನು ಆ ಸಮಯದಲ್ಲಿ ಸಿಇಓ., ಆಗಿರದೆ ಇರುವುದರಿಂದ ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ನಾನು ದಾಖಲಾತಿಗಳನ್ನು ನೋಡಿ ಹೇಳಬಹುದು. ಆ ಹಿಂದೆ ಇರುವ ಸಿಇಓ., ಅವರು ಈಗ ಮರಣ ಹೊಂದಿರುತ್ತಾರೆ.

ಈ ಹಿಂದೆ ಇದ್ದ ಸಿಇಓ., ಆದ ಪೃಥ್ವಿರಾಜ್ ಅವರಿಂದ ನಾನು ಚಾರ್ಜನ್ನು ಪಡೆದುಕೊಂಡಿರುತ್ತೇನೆ. ನಾನು ಪೃಥ್ವಿರಾಜ್ ಅವರಿಂದ ದಿನಾಂಕ:24/02/2022 ರಂದು ಚಾರ್ಜನ್ನು ಪಡೆದುಕೊಂಡಿರುತ್ತೇನೆ.

ಆರೋಪಿಯವರು ನನ್ನ ಮುಂದೆ ನಿಪಿ.1 ರಂತೆ ಚೆಕ್ಕನ್ನು ನೀಡಿರುವುದಿಲ್ಲ ಎಂದರೆ ನಾನು ಆ ಸಮಯದಲ್ಲಿ ಸಿಇಓ., ಆಗಿರುವುದಿಲ್ಲ.

ನಮ್ಮ ವಕೀಲರ ಮೂಲಕ ಆರೋಪಿಗೆ ನೋಟಿಸ್ ಜಾರಿಯಾಗಿರುತ್ತದೆಯೆ ಎಂದರೆ ಎರಡು ಸಲ ಸದರಿ ನೋಟಿಸ್ ಹೋಗಿ door lock ಆಗಿದ್ದರಿಂದ ವಾಪಾಸು ಬಂದಿರುತ್ತದೆ. ಸಾಕ್ಷಿಯು ಮುಂದುವರೆದು ಪೋಲಿಸ್ ಸ್ಟೇಷನ್ ಗೆ ಹೋಗಿ ವಿಚಾರಿಸಿದಾಗ ಅವರು ಸಿಕ್ಕಿರುವುದಿಲ್ಲ.

ನಿಪಿ.10 ರಂತೆ ನನಗೆ ನ್ಯಾಯಾಲಯದಲ್ಲಿ ಸಂಸ್ಥೆಯ ಪರವಾಗಿ ಪ್ರಕರಣಗಳನ್ನು ನಡೆಸಲು ಅಧಿಕಾರ ಪತ್ರವನ್ನು ನೀಡಿರುತ್ತಾರೆ ಎಂದರೆ ಸರಿ. ನಿಪಿ.10 ರಲ್ಲಿ ದಿನಾಂಕ:11/03/2022 ರಲ್ಲಿ ನಾನು ಶ್ರೀಮತಿ ಶ್ವೇತ ಕೋಂ ಎನ್. ರವಿಯವರಿಂದ ಚಾರ್ಜನ್ನು ಪಡೆದುಕೊಂಡಿರುತ್ತೇನೆ ಎಂದರೆ ಹೌದು. ಸಾಕ್ಷಿಯು ಮುಂದುವರೆದು ಆ ಸಮಯದಲ್ಲಿ ಪೃಥ್ವಿರಾಜ್ ಅವರಿಗೆ ಅಪಘಾತವಾಗಿದ್ದರಿಂದ ಶ್ರೀಮತಿ ಶ್ವೇತ ಅವರನ್ನು ಪ್ರಭಾರಿ ಮುಖ್ಯ ಕಾರ್ಯ ನಿರ್ವಾಹಕರಾಗಿ ನೇಮಕ ಮಾಡಿರುತ್ತಾರೆ, ಅದಕ್ಕೆ ಸದರಿ ಚಾರ್ಜನ್ನು ನಾನು ಶ್ರೀಮತಿ ಶ್ವೇತ ಕೋಂ ಎನ್. ರವಿಯವರಿಂದ ಪಡೆದುಕೊಂಡಿರುತ್ತೇನೆ.

ಪೃಥ್ವಿರಾಜ್ ಅವರಿಗೆ ಅಪಘಾತವಾಗಿದ್ದರಿಂದ ನಾನು ಚಾರ್ಜನ್ನು ಶ್ರೀಮತಿ ಶ್ವೇತ ಕೋಂ ಎನ್ ರವಿ ಅವರಿಂದ ಪಡೆದುಕೊಂಡಿರುತ್ತೇನೆ.

ಆರೋಪಿಯವರು ನಿಪಿ.1 ರಂತೆ ಚೆಕ್ಕನ್ನು ನೀಡಿರುವ ಬಗ್ಗೆ ನನಗೆ ಖುದ್ದು ಮಾಹಿತಿಯಿಲ್ಲ ಎಂದರೆ ನಾನು ದಾಖಲಾತಿಗಳನ್ನು ನೋಡಿ ಹೇಳಬಹುದು.

ಆರೋಪಿಗೆ ನಮ್ಮ ಸಂಸ್ಥೆಯಿಂದ ದಿನಾಂಕ:16/11/2017 ರಂದು ರೂ.3,00,000/-ಗಳ ಸಾಲ ಸ್ಯಾಂಕ್ಷನ್ ಆಗಿರುವ ಬಗ್ಗೆ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಅದರ ಬಗ್ಗೆ ದಾಖಲಾತಿಗಳನ್ನು ನೋಡಿ ಹೇಳಬಹುದು. ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿಗೆ ಮೂರು ಲಕ್ಷ ರೂಪಾಯಿಗಳು ಸ್ಯಾಂಕ್ಷನ್ ಆಗಿರುವ ಬಗ್ಗೆ ಹಾಗೂ ಅವರು ಎರಡು ಲಕ್ಷ ಎಪ್ಪತ್ತು ಸಾವಿರ ರೂಪಾಯಿಗಳ ಸಾಲವನ್ನು ಪಡೆದುಕೊಂಡಿರುವ ಹಾಗೂ ಅವರು ಎಷ್ಟು ರೂಪಾಯಿಗಳನ್ನು ಕಟ್ಟಿರುತ್ತಾರೆ ಹಾಗೂ ಎಷ್ಟು ಬಾಕಿ ಇದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಸಂಸ್ಥೆಗೆ ರೂ.2,72,230/- ಗಳು ಬರಬೇಕಾಗಿತ್ತು ಅದರ ಬಾಬ್ತು ಅವರು ಚೆಕ್ಕನ್ನು ನೀಡಿದ್ದು , ಅದರ ಪ್ರಕಾರ ಈ ಪ್ರಕರಣವನ್ನು ದಾಖಲಿಸಿರುತ್ತೇವೆ.

ಅರ್ಜಿದಾರರು ನಮ್ಮ ಸಂಸ್ಥೆಯಲ್ಲಿ ಶೇರುದಾರರಾಗಬೇಕು ಹಾಗೂ ಅವರು ಅಗ್ರಿಮೆಂಟ್ ಹಾಗೂ ಪ್ರೋನೋಟ್ ಅನ್ನು ಕೊಟ್ಟು ಸಾಲವನ್ನು ಪಡೆದುಕೊಳ್ಳಬಹುದು. ಆರೋಪಿಯವರಿಗೆ ಸಂಪತ್ ಕುಮಾರ್ ಬಿನ್ ಸಂಜೀವ ಪೂಜಾರಿ, ಹಿರೇಗುಡ್ಡ ರಸ್ತೆ, ಜಯಪುರ ಇವರು ಜಾಮೀನುದಾರರಾಗಿರುತ್ತಾರೆ. ಸದರಿ ಸಾಲವನ್ನು ಅಭಿವೃದ್ಧಿ ಹೆಡ್ ಮೂಲಕ ಆರೋಪಿಗೆ ನೀಡಿರುತ್ತಾರೆ. ಸದರಿ ಸಾಲವನ್ನು ಪ್ರತಿ ತಿಂಗಳ ಕಂತಿನಲ್ಲಿ ಕಟ್ಟಬೇಕೆಂದು ಒಂದು ವರ್ಷದ ಅವಧಿಗೆ ನೀಡಿರುತ್ತಾರೆ. ಆರೋಪಿಯವರು ಸದರಿ ಸಾಲದ 3-4 ಕಂತುಗಳನ್ನು ಮಾತ್ರ ಕಟ್ಟಿರುತ್ತಾರೆ, ಪೂರ್ತಿ ಕಂತುಗಳನ್ನು ಕಟ್ಟಿರುವುದಿಲ್ಲ, ಸದರಿ ಕಂತುಗಳನ್ನು ಕಟ್ಟಿರುವ ಬಗ್ಗೆ ನಮ್ಮ ಸಂಸ್ಥೆಯಲ್ಲಿ ಮಾಹಿತಿ ಇರುತ್ತದೆ ಎಂದರೆ

ಸರಿ. ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಬಹುದು.

(ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು , ಸಮಯಾವಕಾಶ ನೀಡಿ ಮುಂದೂಡಲಾಯಿತು.)

(ದಿನಾಂಕ:21-01-2023 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸ.ಇ. ಓ.

ಸಹಿ/-xxx
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ: ಕೊಪ್ಪ.

ಸಾಕ್ಷಿಯ ಸಹಿ: